ಇ) ಪಠ್ಯ ಪುಸ್ತಕ ಪ್ರಪಚನಗಳು ಹೆಚ್ಚು ವ್ಯವಹಾರಿಕ ಮತ್ತು ವೈಜ್ಞಾನಿಕವಾಗಲು ಸಲಹ ಸಮಿತಿಯನ್ನು ನಿವೃತ್ತರಾದ ವೀಧಾವಿ ಶಿಕ್ಷಕರನ್ನು ನೇರ್ಪಡೆ ಮಾಡಂವ ವಿಚಾರವೇನಾದರೂ ಸರ್ಕಾರದಲ್ಲಿದೆಯೇ ?

ಶ್ರೀ ಬಿ. ಸೋವಂಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು). —

ಅ) ಹೌದು.

ಆ) ಪರಿಷ್ಕೃತ ಪಠ್ಯ ಪಸ್ತು ಹಾಗೂ ಪಠ್ಯ ಕ್ರಮದ ಆದೇಶವು ಹೊರಡಿಸುವ ಹಂತದಲ್ಲಿದೆ.

ಇ) ನಿವೃತ್ತರಾದವರೂ ಸೇರಿದಂತೆ ಶಿಕ್ಷಣ ರಂಗದಲ್ಲಿ ಪರಿಣಿತರಾದವರ ಹಾಗೂ ಅನುಭವಸ್ತರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತದೆ'

ಪದವೀ ಕಾಲೇಜುಗಳ ಪ್ರಾಧ್ಯಾಪಕರಿಗೆ ಕಾಲಮಿತಿ ಬಡ್ತಿವೇತನ

೧೨೫ ಶ್ರೀ ಬಾಬುರೆಡ್ಡಿತಂಗಳ್(ಬೀಳಗಿ).—ಮಾನ್ಯಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕಿರಿಯ ಕಾಲೇಜುಗಳಿಂದ ಪದವಿ ಕಾಲೇಜುಗಳಿಗೆ ವರ್ಗಾವಣೆಯಾದ ಪ್ರಾಧ್ಯಾಪಕರ ಸಂಖ್ಯೆ ಎಷ್ಟು ?

ಆ) ಈ ರೀತಿ ವರ್ಗಾವಣೆಯಾದವರಿಗೆ ಅವರ ಸೇವಾ ನಿಯಮಗಳ ಪ್ರಕಾರ ಕಾಲಮಿತಿ ವೇತನ ಬಡ್ತಿ ವೇತನ ಮತ್ತು ''ಎಸ್'' ರೀಡರ್ ಹುದ್ದೆಗಳನ್ನು ಪರಂಜೂರು ಮಾಡಲಾಗಿದೆಯೇ ?

ಇ) ಈ ಕಡತಗಳನ್ನು ವಿಲೇವಾರಿ ಮಾಡಲು ಉಂಟಾಗಿರುವ ತೊಂದರೆಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಮೂರು (ಅಧ್ಯಾಪಕರು)

ಆ) ಇಲ್ಲ

ಇ) ಹತ್ತು ವರ್ಷಗಳ ಬಡ್ತಿಯಿಲ್ಲದೆ ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಉಪನ್ಯಾಸಕರಿಗೆ ಕಾಲಮಿತಿ ವೇತನ ಬಡ್ತಿ ನೀಡಲು ಕಾನೂನುಗಳಲ್ಲಿ ಅವಕಾಶವಿದೆ. ಹಾಗೂ ಒಂದೇ ಇಲಾಖೆಯ ಖಾಸಗಿ ಅಥವಾ ಅನುದಾನಿತ ಖಾಸಗಿ ಪದವಿ ಕಾಲೇಜುಗಳಲ್ಲಿ ಪಿ.ಹೆಚ್.ಡಿ. ಪದವಿಯನ್ನು ಹೊಂದಿದ್ದು ೧೨ ವರ್ಷಗಳ ಸೇವೆ ಸಲ್ಲಿಸಿರುವ ಮತ್ತು ಪಿ.ಹೆಚ್.ಡಿ. ಪದವಿಯನ್ನು ಹೊಂದಿಲ್ಲದೆ ೧೫ ವರ್ಷ ಸೇವೆ ಸಲ್ಲಿಸಿರುವ ಉಪನ್ಯಾಸಕರಿಗೆ ಸೂಪರ್‌ನ್ಯೂಮರರಿ ರೀಡರುಗಳಾಗಿ ಬಡ್ತಿ ನೀಡಲು ಸರ್ಕಾರ ನಿಯಮಗಳಲ್ಲಿ ಅವಕಾಶವಿದೆ. ಆದರೆ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗಾವಣೆಯಾದ ಉಪನ್ಯಾಸಕರಿಗೆ ಅವರ ಹಿಂದಿನ ಇಲಾಖೆಯ ಸೇವೆಯನ್ನು ಪರಿಗಣಿಸಿ ಕಾಲಮಿತಿ ಬಡ್ತಿ ಅಥವಾ ಕಾಲಮಿತಿ ವೇತನ ಬಡ್ತಿ ನೀಡಲು ಈಗಿರುವ ನಿಯಮಗಳ ಪ್ರಕಾರ ಅವಕಾಶವಿರುವುದಿಲ್ಲ.

ಬಿದರಿ ಯಾತ ನೀರಾವರಿ ಯೋಜನೆ

೫೫೯. ಶ್ರೀ ಬಾಬುರೆಡ್ಡಿ ವಿ. ತಂಗಳ್ (ಬೀಳಗಿ).—ಮಾನ್ಯ ಸಣ್ಣ ನೀರಾವರಿ ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಜಮಖಂಡಿ ತಾಲ್ಲೂಕಿನ ಬಿದರಿ ಗ್ರಾಮದಲ್ಲಿ ಏತ ನೀರಾವರಿ ಯೋಜನೆ ಕೈಗೊಂಡಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಈ ಯೋಜನೆಯಲ್ಲಿ ನೀರಾವರಿಯಾಗುತ್ತಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಇ) ಅಲ್ಲಿಯ ಜಾಕ್‌ವೆಲ್ ಕುಸಿದು ಬಿದ್ದು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಅದನ್ನು ಈವರೆಗೆ ದುರಸ್ತಿ ಮಾಡದಿರಲು ಕಾರಣವೇನು ?